ಅರಸಬಯಸಿತು ಮನಸು. ಅವೆಲ್ಲ ಇಬ್ಬನಿ ಹನಿಗಳ ತೇವವಾರಿ ಉಳಿದ ಕೇವಲ ಕಲೆಗಳಂತೆ ಮಸುಕು ಮಸುಕು. ಸಾವಿರ ಪ್ರಶ್ನೆಗಳಿಗೆ ಉತ್ತರ ಬೇಕಿತ್ತು. ಎಲ್ಲವೂ ವ್ಯರ್ಥ ಅನ್ನಿಸುವ ವೈರಾಗ್ಯದ ಸೋಲಿನ ಹೊತ್ತಿಗೆ ಎರಡೆ ಪ್ರಶ್ನೆ ಕೇಳಿದಳು: 'ಶರಣಪ್ಪ ಕಾಕಾನ ಕಡಿಂದ ಅಡ್ವಾನ್ಸ್ ರೊಕ್ಕಾ ತಗೊಂಡ್ವಾಂಗ ಕಾಣತದ?' ಆಮೇಲೆ, 'ಗಂಡಿನ ಊರು ಯಾವದು?'

ಕೊರೊನಾ ನೆಪದಲ್ಲಿ ಮದುವೆ ಸರಳವಾಗಿ ಮನೆಯಲ್ಲೆ ನಡೆಯಿತು. ಗಂಡಿನ ಕಡೆಯ ನಾಕುಜನ ಈ ಕಡೆಯಿಂದ ಶರಣಪ್ಪ ಮತ್ತೆ ಊರ ಮೂರುಜನ ಹಿರಿಯರಿಗೆ ಗಂಡಿನವರ ಖರ್ಚಿನಲ್ಲಿ ಊಟ ಹಾಕಿದರು. ಆವತ್ತೆ ನಡೆದ ವಿದಾಯದಲ್ಲಿ, 'ನಮ್ಮ ಈ ಪ್ರದೇಸದವ್ರಿಗಿ ಹಿಂದಿ ಅಷ್ಟಿಷ್ಟು ಗೊತ್ತ ಇರ್ತದ; ಭಾಷಾದ ತೊಡಕಿಲ್ಲ. ಅವ್ರು ವಳ್ಳೇಜನ; ವಳ್ಳೇ ವಗತನ. ಆರಾಮಿರವ್ವ' ಶರಣಪ್ಪ ಕಾಕಾ ಆಶೀರ್ವಾದ ಮಾಡಿದ್ದ. ತಂಗಿಯರು ಅವಳ ಮೇಲೇ ದೃಷ್ಟಿ ಕೀಲಿಸಿ ನಿಂತಿದ್ದರು. ಅವ್ವ ಕಾಣಿಸಲಿಲ್ಲ; ಎಲ್ಲಿ ಅಳುತ್ತ ಮರೆಯಾಗಿದ್ದಳೋ. ಸ್ಟೇಶನ್‌ನಲ್ಲಿ ನಿಂತವಳು ಸುತ್ತ ಕಣ್ಣು ಹಾಯಿಸಿದಳು. ಯಾವಾಗಿನಂತೆ ಶಾಬಾದ ಸಿಮೆಂಟ್ ಫ್ಯಾಕ್ಟರಿಯ ಚಿಮಣಿ ಹೊಗೆಯುಗುಳುತ್ತಿತ್ತು. ದೂರದಲ್ಲಿ ವಾಡಿ ಸಿಮೆಂಟ್ ಫ್ಯಾಕ್ಟರಿಯ ಹೊಗೆ ಕಾಣುತ್ತಿತ್ತು. ಹಗಲು ರಾತ್ರಿ ಓಡುತ್ತಿರುವ ರೈಲು ಪ್ರಯಾಣ ಅಂತ್ಯವಾಗುವಂತೆ ಕಾಣಲಿಲ್ಲ. ರೈಲು ನಿಂತಾಗ ಊಟವೊ ತಿಂಡಿಯೊ ನೀರೋ ಚಹವೋ ಜೊತೆಯಿದ್ದವ ತಂದು ಕೊಡುತ್ತಿದ್ದ. ಅವರೂ ಕುಡಿಯುತ್ತಿದ್ದರು. ಕಿಚಪಿಚ ತಮ್ಮಲ್ಲೆ ಸಂಭಾಷಣೆ ನಡೆಸುತ್ತಿದ್ದರು. ತಂಬಾಕನ್ನು ಅಂಗೈಯಲ್ಲಿ ತಿಕ್ಕಿ ಬಾಯಿಗೆ ತುಂಬಿಕೊಳ್ಳುತ್ತಿದ್ದರು. ಒಂದರಿಂದ ಇನ್ನೊಂದು ರೈಲಿಗೆ ಬದಲಿಸುತ್ತ ಕೊನೆಗೊಮ್ಮೆ ಒಂದು ಕಡೆ, 'ರೇವಾಡಿ ಬಂತು, ಇಳೀರಿ' ಅನ್ನುತ್ತ ಇವಳನ್ನು ಸಾಮಾನಿನೊಂದಿಗೆ ಇಳಿಸಿಕೊಂಡರು. ಟೆಂಪೊದಲ್ಲಿ ಕುಳಿತವರು ಅರ್ಧಗಂಟೆಯ ಅನಂತರ ಮನೆಯೊಂದರ ಎದುರು ಇಳಿದರು. ಮದುವೆಯ ಜೋಡಿಯನ್ನು ಅಂಗಳದಲ್ಲಿ ಹಾಕಿದ ಕುರ್ಚಿಗಳ ಮೇಲೆ ಕೂಡಿಸಿ ಮುಖ ಕಾಣದಂತೆ ಸೆರಗಿನ ಮರೆ ಮಾಡಿಕೊಂಡ ನಾಕಾರು ಹೆಂಗಸರು ಸೇರಿ ಏನೇನೊ ಶಾಸ್ತ್ರಗಳನ್ನು ಮಾಡಿದರು. ಪದ್ಮಾವತಿಯ ಮುಖ ಮರೆಯಾಗುವಂತೆ ತಲೆಯಮೇಲಿನ ಸೆರಗನ್ನೆಳೆದು ಕುಡಿಯಲು ಶರಬತ್ತು ಕೊಟ್ಟರು. ರಾತ್ರಿ ರೊಟ್ಟಿ, ಗೋಧಿಹಲ್ವದ ಊಟ. ಎಷ್ಟೋ ಸಮಯದಮೇಲೆ ನಾಕಾರು ಹೆಂಗಸರು ನಗುತ್ತ ತಮಾಷೆ ಮಾಡುತ್ತ ಇವಳನ್ನು ಸಣ್ಣ ಕೋಣೆಯೊಂದರಲ್ಲಿ ಮಂಚದಮೇಲೆ ಕೂಡಿಸಿ ಹೋದರು. ಸ್ವಪ್ನದಲ್ಲಿದ್ದಂತಿದ್ದ ಅವಳಿಗೆ ದಿನಗಳ ಅನಂತರ ಸಿಕ್ಕ ಏಕಾಂತದಲ್ಲಿ ವರ್ತಮಾನದ ಸಾಕ್ಷಾತ್ಕಾರವಾಗುತ್ತ ಹೋಗಿತ್ತು. ತನಗೆ ಮದುವೆಯಾಗಿದೆ. ಈಗ ಬಹುಶಃ ಮೊದಲ ರಾತ್ರಿಗೆ ಬಿಟ್ಟಿದ್ದಾರೆ. ಎದೆ ಡವಡವ ಹೊಡೆದುಕೊಳ್ಳತೊಡಗಿತು. ಏನೇನೊ ಚೀಲ ಸಾಮಾನುಗಳನ್ನಿಟ್ಟ ಕೋಣೆ ತೀರ ಕಿರಿದಾಗಿತ್ತು. ಸಗಣಿ ಗಂಜಲದ ವಾಸನೆ ಎಲ್ಲಿಂದ ಸುಳಿಯುತ್ತಿತ್ತು ಗೊತ್ತಾಗಲಿಲ್ಲ. ಸೊಳ್ಳೆಗಳನ್ನು ನಿವಾರಿಸಲಿಕ್ಕಿರಬೇಕು ಯಾವುದರದೊ ಹೊಗೆ ಬರುತ್ತಿತ್ತು. ಅಧೀರತೆಯಲ್ಲೂ ಅವಳ ಸ್ತ್ರೀತ್ವ ಎಚ್ಚೆತ್ತಿತು. ತಾನೀಗ ಗಂಡನನ್ನು ಒಲಿಸಿಕೊಳ್ಳಬೇಕು. ಅಪರಿಚಿತ ಜನ ಮತ್ತು ಪರಿಸರದಲ್ಲಿ ತನ್ನ ಜೀವನವಿಡೀ ಸಾಗಬೇಕಿದೆ. ಬಾಗಿಲು ಕರ್ರ ಎಂದು ತೆರೆದುಕೊಂಡು ಮುಚ್ಚಿಕೊಂಡಿತು. ಆತ ಪಕ್ಕದಲ್ಲಿ ಬಂದು ಕುಳಿತ. 'ಅರೆ... ಮುಖ ಹೇಗಿದೆ ನೋಡೋಣ...' ಅನ್ನುತ್ತ ಸೆರಗೆತ್ತಿದ. ಸಾರಾಯಿಯ ವಾಸನೆ ಘಮ್ಮೆಂದು ನಾರಿತು. ಅಪ್ಪಿಕೊಂಡ. ದಡದಡ ಎಂದು ವರ್ತಮಾನಕ್ಕಿಳಿಯುವ ತೀರ ಅಪರಿಚಿತ ಕ್ಷಣಗಳು. ಕಚ್ಚಿ ಎಲ್ಲೆಲ್ಲೊ ಹಿಸುಕುವ ನೋವು... ಉರಿ ಪ್ರಜ್ವಲಿಸುವ ಇರಿತ; ಒಂದೇಸಮ ಇರಿತ... ಮುಕ್ತಾಯದ ಅನಂತ ಪ್ರತೀಕ್ಷೆ. ಬೆಳಗ್ಗೆ ಜ್ವರ ಬಂದಂತಾಗಿತ್ತು. ಇಟ್ಟಂಗಿಯಲ್ಲಿ ಒರಟಾಗಿ ಕಟ್ಟಿದ ಗಿಲಾಯಿಯಿಲ್ಲದ ಗೋಡೆಯಮೇಲೆ ಆರ್ಸಿಸಿ ಮುಚ್ಚಿಗೆಯ ಮನೆ. ಎದುರು ಅಂಗಳದಲ್ಲಿ ಬೇವಿನ ಎರಡು ಮರಗಳು, ಅಡಿಯಲ್ಲಿ ಐದಾರು ಎಮ್ಮೆಗಳು. ದೊಡ್ಡ ಜಾತಿಯವು. ಗಂಡನೆನಿಸಿಕೊಂಡವ ಬಕೆಟ್ಟನ್ನು ಮೊಳಕಾಲ ನಡುವೆ ಸಿಕ್ಕಿಸಿಕೊಂಡು ಹಾಲು ಕರೆಯುತ್ತಿದ್ದ. ಈ ಕಡೆ ಐದಾರು ಬಕೆಟ್ ಹಾಲಿಡಲ್ಪಟ್ಟಿತ್ತು. ಬೆಳಗಿನ ಹಾಲಿಗಾಗಿ ಕೆಲವರು